ಸಾಗಾಟ ಸ್ಪರ್ಧಾತ್ಮಕವಾಯಿತು. ಮಲೇಷ್ಯಾದಂಥ ಪುಟ್ಟ ರಾಷ್ಟ್ರ ಪ್ರವಾಸೋದ್ಯಮದಿಂದ ದೇಶದ ಆರ್ಥಿಕತೆಯನ್ನು ಹೇಗೆ ಬಲಪಡಿಸಿಕೊಳ್ಳಬಹುದು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟಿದೆ. ಅಲ್ಲಿಂದ ಮುಂದಿನ ಹತ್ತು ವರ್ಷಗಳಲ್ಲಿ ಭಾರತವೂ ಸೇರಿದಂತೆ ಪ್ರಪಂಚದ ಪ್ರವಾಸೋದ್ಯಮ ಅಚ್ಚರಿ ಹುಟ್ಟಿಸುವಂತೆ ಬೆಳೆದಿದ್ದು, ಇಂದು ಬಹುತೇಕ ರಾಷ್ಟ್ರಗಳ ಬೊಕ್ಕಸಕ್ಕೆ ಹೆಚ್ಚು ವರಮಾನ ತರುವ ದೊಡ್ಡ ಆರ್ಥಿಕತೆಯಾಗಿ ಬೆಳೆದು ನಿಂತಿದೆ.

ಇದೇ ಹೊತ್ತಿಗೆ ಕಂಪ್ಯೂಟರ್ ಕ್ಷೇತ್ರವೂ ಭಾರತದಲ್ಲಿ ವ್ಯಾಪ್ತವಾಗಿ ಬೆಳೆದು ವಾರಾಂತ್ಯವೆಂಬ ಹೊಸ ಪದ ಆ ಕ್ಷೇತ್ರದ ನೌಕರಿದಾರರ ಶಬ್ದಕೋಶವನ್ನು ಹುರುಪಿನಿಂದ ಸೇರಿತು. ಜೊತೆಗೆ ಅವರ ವಾರಾಂತ್ಯ ಪ್ರವಾಸ, ಪರರಾಷ್ಟ್ರಗಳ ಹಾರಾಟಗಳು ಸರ್ವೇ ಸಾಮಾನ್ಯವಾದವು. ಇದಕ್ಕೆ ಪೂರಕವಾಗಿ ಹಿಂದೆ ಯಾತ್ರೆಯಾಗಿದ್ದ ಪ್ರವಾಸೋದ್ಯಮವೂ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ದೇವಾಲಯ ಪ್ರವಾಸ, ಐತಿಹಾಸಿಕ ಪ್ರವಾಸ, ಕೃಷಿ ಪ್ರವಾಸ, ಸಾಹಸ ಪ್ರವಾಸ, ಸಂಸ್ಕೃತಿ ಪ್ರವಾಸ, ವನ್ಯಜೀವಿ ಪ್ರವಾಸ, ವೈದ್ಯಕೀಯ ಪ್ರವಾಸ, ಪ್ರಕೃತಿ ಪ್ರವಾಸ, ಧಾರ್ಮಿಕ ಪ್ರವಾಸ, ಬೀಚ್ ಪ್ರವಾಸ, ಕೈಗಾರಿಕಾ ಪ್ರವಾಸ, ಆರೋಗ್ಯ ಪ್ರವಾಸ ಮೊದಲಾಗಿ ಹತ್ತಾರು ಶಾಖೆಗಳಾಗಿ ಬೆಳೆಯಿತು.

ಇದಕ್ಕೆ ಕೇವಲ ಎರಡು ದಶಕಗಳ ಹಿಂದೆ ತಿರುಪತಿ, ವೈಷ್ಣೋದೇವಿ, ಶಿರಡಿ ಪ್ರದೇಶಗಳು ಹುಂಡಿಯ ಮೂಲಕ ಬರುವ ಆರ್ಥಿಕ ಗಳಿಕೆಯಲ್ಲಿ ಕ್ರಮವಾಗಿ ಮೊದಲ ಮೂರು ಸ್ಥಾನಗಳನ್ನು ಹೊಂದಿದ್ದವು. ದಕ್ಷಿಣದಲ್ಲಿ ಮಧುರೆ ಮೀನಾಕ್ಷಿ, ರಾಮೇಶ್ವರ, ಗುರುವಾಯೂರು, ಪಳನಿ, ಮೈಸೂರಿನ ಚಾಮುಂಡಿ ಬೆಟ್ಟ, ಹಳೇಬೀಡು, ಬೇಲೂರು, ಶ್ರವಣಬೆಳಗೊಳ ಮೊದಲಾದ ಬೆರಳೆಣಿಕೆಯ ದೇವಾಲಯಗಳು ಪ್ರವಾಸಿಗರನ್ನು ಹೆಚ್ಚು ಆಕರ್ಷಿಸುತ್ತಿದ್ದರೆ, ಉತ್ತರದಲ್ಲಿ ಕಾಶಿ, ಹರಿದ್ವಾರ, ಹೃಷಿಕೇಶ, ಸೋಮನಾಥ, ದ್ವಾರಕಾ ಮುಂತಾದ ಕ್ಷೇತ್ರಗಳು ಪ್ರಮುಖ ಆಕರ್ಷಣೆಯಾಗಿದ್ದವು. ಉತ್ತರ ಭಾರತದ ಪ್ರತಿಕೂಲ ಹವಾಗುಣದಿಂದ, ಸಾಗಾಟದ ತೊಂದರೆಯಿಂದ ಅಲ್ಲಿನ ಉಳಿದ ಕ್ಷೇತ್ರಗಳಿಗೆ ಜನರ ಓಡಾಟ ಕಡಿಮೆಯೇ ಇತ್ತು.

1990ರ ನಂತರದ ಭಾರತದಲ್ಲಿ ಆರ್ಥಿಕ ವಿಮುಕ್ತತೆ, ವಿದೇಶಿ ನೇರ ಬಂಡವಾಳ ಹೂಡಿಕೆ ಹಾಗೂ 'ಇನ್ಕ್ರೆಡಿಬಲ್ ಇಂಡಿಯಾ'ದಂತಹ ಅಭಿಯಾನಗಳು, ತನ್ಮೂಲಕ ಮೂಲ ಸೌಕರ್ಯಗಳಾದ ರಸ್ತೆ, ಸಾಗಾಟ, ಸಂಚಾರಿ ಸೌಲಭ್ಯಗಳ ಅಭಿವೃದ್ಧಿ, ಇವುಗಳಲ್ಲಿ ಖಾಸಗಿ ಸಹಭಾಗಿತ್ವದ ಹೆಚ್ಚಳ, ಪ್ರವಾಸೋದ್ಯಮವನ್ನು ಭಕ್ತಿಯೊಂದಿಗೆ ವ್ಯಾವಹಾರಿಕ ಹಾಗೂ ಕೈಗಾರಿಕಾ ಬೆಳವಣಿಗೆಯಾಗಿಸುವುದರ ಜೊತೆಗೆ ಉದ್ಯೋಗ ಸೃಷ್ಟಿಯ ನೆಲೆಯಾಗಿಯೂ ಬೆಳೆಸಿದ್ದರಿಂದ ಇಸವಿ 2002ರ ಹೊತ್ತಿಗೆ ಸರ್ಕಾರ ರಾಷ್ಟ್ರೀಯ ಹೊಸ ಪ್ರವಾಸ ನೀತಿಯನ್ನು ಜಾರಿಗೆ ತಂದು ಆಧುನಿಕ ಭಾರತಕ್ಕೆ ವೇದಿಕೆಯನ್ನು ನಿರ್ಮಿಸಿತು. ಇದಕ್ಕೆ ಹಿನ್ನೆಲೆಯಾಗಿ ಪ್ರವಾಸೋದ್ಯಮವು ಉದ್ಯೋಗ ನಿರ್ಮಿತಿಯ ಜೊತೆಗೆ ವಿದೇಶಿ ವಿನಿಮಯವನ್ನು ತರಬಲ್ಲದು ಎಂಬ ಅರಿವಿನೊಂದಿಗೆ 1982ರಲ್ಲಿ ತಂದ ರಾಷ್ಟ್ರೀಯ ಪ್ರವಾಸ ನೀತಿ ಹಾಗೂ 1992ರ ರಾಷ್ಟ್ರೀಯ ಯೋಜನಾ ನೀತಿಗಳು ಪ್ರವಾಸೋದ್ಯಮವನ್ನು ಆರ್ಥಿಕ ಅಭಿವೃದ್ಧಿಯ ಜೊತೆಗೆ ದೇಶದ ವ್ಯಕ್ತಿತ್ವ ನಿರ್ಮಾತೃವಾಗಿಯೂ ಬೆಳೆಸಲು ಬಳಕೆಯಾದವು.

ಈ ಹಿನ್ನೆಲೆಯಲ್ಲಿ ಗುಜರಾತ್‌ನ ಪ್ರವಾಸೋದ್ಯಮಕ್ಕೆ ಆಗಿನ ಮುಖ್ಯಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರ 'ವೈಬ್ರಂಟ್ ಗುಜರಾತ್' ಎಂದು ಅಭಿಯಾನ ಮಾಡಿದರು. 'ಖುಷ್ಬೂ ಗುಜರಾತ್ ಕೀ' ಅಭಿಯಾನಕ್ಕೆ ಅಮಿತಾಬ್ ಬಚ್ಚನ್ ರಾಯಭಾರಿಯಾಗಿ 'ಏಕ್ ಬಾರ್ ಆಯಿಎನ' ಎಂದು ಅಕ್ಕರೆಯಿಂದ ಕರೆದರು. ಅದೇ ಹೊತ್ತಿಗೆ ಕೇರಳ ರಾಜ್ಯ 'ಗಾಡ್ಸ್ ಓನ್ ಕಂಟ್ರಿ'



ಸಂಕಟ ಬಂದಾಗ ವೆಂಕಟರಮಣ!
ದೇಶದ ಶ್ರೀಮಂತ ದೇಗುಲ ಎನಿಸಿದ ತಿರುಪತಿ ವೆಂಕಟೇಶ್ವರನ ಸಾನ್ನಿಧ್ಯದಲ್ಲಿ ಭಕ್ತರ ಸಂಭ್ರಮ



ಸಮಸ್ಯೆಗಳಿಗೆ 'ರಾಯರಿದ್ದಾರೆ' ಎನ್ನುವ ಧೈರ್ಯ ತುಂಬುವ ಮಂತ್ರಾಲಯ